

## ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು



**ವಿಯೋನ ಡಿಸೋಜ**
4ನೇ ತರಗತಿ, ಸೇಂಟ್ ಫಿಲೋಮಿನಾ ಪ್ರಾಥಮಿಕ ಶಾಲೆ, ಹಾಸನ







**ಗುರು ಪ್ರಸಾದ್ ಎಚ್.ಎಂ.**
6ನೇ ತರಗತಿ ನ್ಯಾಷನಲ್ ರೆಸಿಡೆನ್ಸಿಯಲ್ ಸ್ಕೂಲ್ ಕೋಣಂದೂರು, ಶಿವಮೊಗ್ಗ

'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in

# ಯಾಕೆ ಹೀಗೆ?

■ **ರಾಜಶೇಖರ ಕುಕ್ಕುಂದಾ**
ಕಲೆ: ಸಂತೋಷ್ ಸಸಿಹಿತ್ಲು



ಅಮ್ಮ ಒಬ್ರು ಆಂಟಿ ಜೊತೆ
ಹರಟೆ ಹೊಡಿತಾರೆ!
ಅಪ್ಪ ಅಂತು ನಾಯಿ ಹಿಡ್ದು
ವಾಕ್ ಹೊರಡ್ತಾರೆ!

ಅಜ್ಜ–ಅಜ್ಜಿ ಟೀವಿಯೊಳ್ಗೆ
ಮುಳುಗಿಬಿಡ್ತಾರೆ !
ಅಕ್ಕಅಣ್ಣ ನೆಪ ಹೇಳಿ
ಜಾರಿಬಿಡ್ತಾರೆ!

ಹಗಲು ರಾತ್ರಿ ನಂಗೆ ಮಾತ್ರ
ಓದು ಅಂತಾರೆ!
ಎಲ್ರು ಸೇರಿ ಸುಮ್ನೆ ನನ್ನ
ತಲೆ ತಿಂತಾರೆ!

ಗುಬ್ಬಿ ಕಾಗೆ ಬೆಕ್ಕಿಗೆಲ್ಲ
ಯಾರು ಕೇಳ್ತಾರೆ?
ಕಳ್ರು ಸಹಿತ ಜೈಲು ಸೇರಿ
ಹಾಯಾಗಿರ್ತಾರೆ!

ದೊಡ್ಡೋರಂತ ದೊಡ್ಡೋರೆಲ್ಲ
ಯಾಕೆ ಇರ್ತಾರೆ?
ಸಣ್ಣೋರಂತ ಸಣ್ಣೋರ್ನೆಲ್ಲ
ಸಣ್ಣ ಮಾಡ್ತಾರೆ! ■